ಎಸ್‌ಸಿಸಿಹೆಚ್-09 ಸಿಸಿ ನಂ.346/2020

ಪಿಡಬ್ಲೂ.1: ಶ್ರೀಮತಿ. ತ್ರಿಪುರ ವಿಶ್ವನಾಥ್.,

**<u>ದಿನಾಂಕಃ 06.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನನಗೆ ಕನ್ನಡ, ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ನಾನು ಕುಮಾರ್ ರವರ ವಿರುದ್ದ ಹೂಡಿದ ಪ್ರಕರಣದ ತೀರ್ಪಿನ ಪ್ರತಿಯಾಗಿರುತ್ತದೆ ಎಂದು ಒಪ್ಪಿಕೊಂಡ ಮೇರೆಗೆ ದಾಖಲೆಯನ್ನು **<u>ನಿ.ಡಿ.2</u>** ಎಂದು ಗುರುತಿಸಲಾಯಿತು. ನಿ.ಡಿ.2 ರಂತೆ ನಿಮಗೆ ಹಣ ನೀಡಲು ಅರ್ಹತೆ ಇರಲಿಲ್ಲ ಎಂದು ಪ್ರಕರಣವನ್ನು ವಜಾಗೊಳಿಸಿದರು ಎಂದರೆ ನನಗೆ ಅರ್ಹತೆ ಇತ್ತು ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡುವಾಗ ನನ್ನ ಗಂಡ, ನನ್ನ ತಮ್ಮ ನಾಗರಾಜ್ ಹಾಗೂ ಕಾರಿನ ಚಾಲಕ ವಿಶ್ವನಾಥ್ ಇದ್ದರು. ನಿಮ್ಮ ತಮ್ಮ ನಾಗರಾಜ್ ನೀವು ನ್ಯಾಯಾಲಯಕ್ಕೆ ಹಾಜರಾಗುವಾಗ ಪ್ರತಿಸಲವೂ ನಿಮ್ಮ ಜೊತೆ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿ. ನಿಮ್ಮ ಗಂಡನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸಾಕ್ಷಿ ನುಡಿಸಲು ಸಾಧ್ಯವೇ ಎಂದರೆ ಅವರು ಮರಣ ಹೊಂದಿ ಎರಡು ವರ್ಷಗಳಾಗಿವೆ ಎಂದು ನುಡಿಯುತ್ತಾರೆ. ನಿಮ್ಮ ಗಂಡನ ಸಮಕ್ಷಮ ಹಣ ನೀಡಿದ್ದೇನೆಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗರಾಜ್ ಮತ್ತು ವಿಶ್ವನಾಥ್ ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸಾಕ್ಷಿ ನುಡಿಸಲು ಸಾಧ್ಯವೇ ಎಂದರೆ ಸಾಕ್ಷಿಯು ನಾಗರಾಜ್ ರವರನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

**2.** ನಿ.ಪಿ.8 ಮತ್ತು 9 ಅನ್ನು ಯಾವ ದಿನಾಂಕದಂದು ನೀಡಿದ್ದರು ಎಂದರೆ ನನಗೆ ದಿನಾಂಕ ಮರೆತುಹೋಗಿರುತ್ತದೆ ಎಂದು ನುಡಿಯುತ್ತಾರೆ. ಆನ್ ಡಿಮಾಂಡ್ ಪ್ರೋನೋಟಿನಲ್ಲಿರುವ ಸಹಿ ಆರೋಪಿಯದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ಸಮಕ್ಷಮ ಸಹಿ ಮಾಡಿದ್ದಾರೆ ಎಂದುನುಡಿಯುತ್ತಾರೆ. ಜಗ್ಗೇಶ್ ರವರ ವಿರುದ್ದ ಸಿಸಿನಂ. 4245/2020 ರೀತ್ಯ ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಈ ರೀತಿ

ಎಲ್ಲರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ನಾನು ಕುಮಾರ್ ರವರ ವಿರುದ್ದ ಹೂಡಿದ ಪಿರ್ಯಾದಿನ ಪ್ರತಿಯಾಗಿರುತ್ತದೆ ಎಂದು ಒಪ್ಪಿಕೊಂಡ ಮೇರೆಗೆ ದಾಖಲೆಯನ್ನು **ನಿ.ಡಿ.3** ಎಂದು ಗುರುತಿಸಲಾಯಿತು.

**3.** ನಿಮ್ಮ ದೂರಿನಲ್ಲಾಗಲೀ, ಪ್ರಮಾಣ ಪತ್ರಿಕೆಯಲ್ಲಾಗಲೀ ಆರೋಪಿಗೆ ಹಣ ನೀಡಿರುವ ನಿರ್ದಿಷ್ಟ ದಿನಾಂಕ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ನೀವು ಖರ್ಚಿಗಾಗಿ ಒಂದು ಲಕ್ಷ, ಎರಡು ಲಕ್ಷ ಇಟ್ಟುಕೊಳ್ಳುತ್ತಿದ್ದೆವು ಎಂದು ಸಾಕ್ಷಿ ನುಡಿದಿದ್ದೀರಿ ಅದನ್ನು ಹೊರತುಪಡಿಸಿ ಹೆಚ್ಚಿನ ಹಣ ನಿಮ್ಮ ಬಳಿ ಇಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆರೋಪಿ ಹಣ ಕೇಳಿದ ಕಾರಣ ಬ್ಯಾಂಕಿನಿಂದ ಹಿಂಪಡೆದು ಮನೆಯಲ್ಲಿ ಇಟ್ಟುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ದೂರಿನಲ್ಲಾಗೀ, ಪ್ರಮಾಣ ಪತ್ರಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ನೀವು ಕೇಳಲಿಲ್ಲ, ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು 2017 ನೇ ಇಸವಿಯಲ್ಲಿ ಹಣ ಕೇಳಿದ್ದರು ಅದರ ನಿರ್ದಿಷ್ಟ ದಿನಾಂಕ ನೆನೆಪಿರುವುದಿಲ್ಲ. ಹಾಗೆಯೇ ಯಾವ ದಿನಾಕದಂದು ಆರೋಪಿಗೆ ಹಣ ನೀಡಿದೆನು ಎಂದು ನಿರ್ದಿಷ್ಟ ದಿನಾಂಕ ನೆನಪಿರುವುದಿಲ್ಲ. 2017 ನೇ ಇಸವಿಯ ಬ್ಯಾಂಕ್ ಸ್ಟೇಟ್‌ಮೆಂಟನ್ನು ಹಾಜರುಪಡಿಸಲು ಸಾಧ್ಯವೆ ಎಂದರೆ ಆ ದಾಖಲೆಯನ್ನು ಎಲ್ಲಿ ಇಟ್ಟಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಬ್ಯಾಂಕ್ ಸ್ಟೇಟ್‌ಮೆಂಟನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಅದು ತುಂಬಾ ಹಳೆಯದ್ದಾಗಿರುವ ಕಾರಣ ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. 2017 ನೇ ಇಸವಿಯಲ್ಲಿ ಆರೋಪಿಗೆ ನೀವು ಹಣ ನೀಡಿರಲಿಲ್ಲ, ಆ ಕಾರಣ ಬ್ಯಾಂಕ್ ಸ್ಟೇಟ್‌ಮೆಂಟನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಆರೋಪಿಗೆ

ಹಣ ನೀಡಿದ್ದೇನೆ ಅದಕ್ಕೆ ಸಂಬಂಧಿಸಿದಂತೆ ಆನ್ ಡಿಮಾಂಡ್ ಪ್ರೋನೋಟ್ ಅನ್ನು ಆರೋಪಿ ನೀಡಿರುತ್ತಾರೆ. ಆರೋಪಿಯು ಯಾರಿಗೆ ಚೆಕ್ಕು ಮತ್ತು ಆನ್ ಡಿಮಾಂಡ್ ಪ್ರೊನೋಟನ್ನು ನೀಡಿದ್ದರು ಎಂದರೆ ನನಗೆ ನೀಡಿದರು ಎಂದು ನುಡಿಯುತ್ತಾರೆ.

**4**. ಆರೋಪಿ ಗಿರಿನಗರದಲ್ಲಿ ವಾಸವಾಗಿರುವ ವಿಷಯ ನಿಮಗೆ ತಿಳಿದಿದ್ದರೂ ಸಹ ಆರೋಪಿ ಯಾವಗಲೋ ಮುಚ್ಚಿರುವ ಅಂಗಡಿಗೆ ನೋಟೀಸು ನೀಡಿರುತ್ತೀರಿ ಎಂದರೆ ಸಾಕ್ಷಿಯು ಆರೋಪಿ ನಮಗೆ ಯಾವುದೇ ವಿಳಾಸವನ್ನು ನೀಡದೆ ಹೋಗಿದ್ದ ಕಾರಣ ನಾವು ಆರೋಪಿಯ ಅಂಗಡಿಯ ವಿಳಾಸಕ್ಕೆ ನೋಟೀಸು ನೀಡಿರುತ್ತೇನೆ. ಆರೋಪಿಗೆ ನೋಟೀಸು ನೀಡುವ ಮೊದಲೆ ಗಿರಿನಗರದ ವಿಳಾಸ ತಿಳಿದಿತ್ತು ಎಂದರೆ ಸರಿಯಲ್ಲ. ಆರೋಪಿ 2015 ನೇ ಇಸವಿಯಲ್ಲಿಯೇ ಅಂಗಡಿಯನ್ನು ಮುಚ್ಚಿದ್ದ ಕಾರಣ ಅವರಿಗೆ ನೋಟೀಸು ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರದು ಅವರಿಗೆ ನೋಟೀಸು ಜಾರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಗೆ ರೂ.5,50,000/- ಹಣ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ಲಪಟಾಯಿಸಲು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.